**ಮೂ.ದಾ.ನಂ.110/2017**

**ಪಿ.ಡಬ್ಲ್ಯು.1**

(**ಇಂದು ದಿನಾಂಕ** 27-05-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ.ಎಮ್.ಎನ್.ಎಸ್ ವಕೀಲರಿಂದಃ**

ವಾದಿಯರ ಜಾಗಾದಲ್ಲಿ ಅವರು ವಾಸ್ತವ್ಯ ಮಾಡುವ ಪೂರ್ವದಲ್ಲಿ ನಾನು ಸದ್ರಿ ಜಾಗಾದಲ್ಲಿ ಮನೆಯನ್ನು ಕಟ್ಟಿರುತ್ತೇನೆ. ಸದ್ರಿ ಜಾಗಾವು ಗದ್ದೆಯಾಗಿರುತ್ತದೆ. ನಂತರ ನಾನು ಆ ಜಾಗಾದಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತೇನೆ. **ಸರ್ವೆ ನಂ. 744 ಹಿಸ್ಸಾ 1 ರ** ಗಡಿಯವರೆಗೆ ನಾನು ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಹಾಗೂ ವಾದಿಯವರ ಜಾಗಾದಲ್ಲಿ ಬೇಲಿ ಇತ್ತು ಎಂದರೆ ಸಾಕ್ಷಿಯು ಅದು ನಂತರ ಮಾಡಿದ್ದು ಆಗಿರುತ್ತದೆ ಎಂದು ನುಡಿಯುತ್ತಾರೆ. ಸುಮಾರು 8 ವರ್ಷಗಳ ಹಿಂದೆ ವಾದಿಯರು ಆ ಬೇಲಿಯನ್ನು ನಿರ್ಮಿಸಿರುತ್ತಾರೆ. ಸದ್ರಿ ಜಾಗಾದಲ್ಲಿ ನಾನು ಮನೆಯನ್ನು ನಿರ್ಮಾಣ ಮಾಡಿದ ನಂತರ ವಾದಿಯರು ಮನೆ ಕಟ್ಟಿರುತ್ತಾರೆ ಎಂದರೆ ಸರಿ.

ನಿ.ಪಿ.7 ರಲ್ಲಿ ಕಂಡು ಬರುವ ಮನೆ ನಮ್ಮದಾಗಿರುತ್ತದೆ ಎಂದರೆ ಸರಿ. ನಿ.ಪಿ.7 ರಲ್ಲಿ ಗಡಿಯಲ್ಲಿ ಇರುವ ಬೇಲಿಗಳು ಕಾಣಿಸುತ್ತವೆ ಎಂದರೆ ಸರಿ. ನಿಪಿ 7 ರಲ್ಲಿ ತೋರಿಸಿದಂತೆ ಗಡಿಯ ಜಾಗಾದಲ್ಲಿ ನಾವು ಕಲ್ಲಿನಿಂದ ಕಂಪೌಂಡ ಹಾಲ್‌ನ್ನು ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾವು ಸದ್ರಿ ಗಡಿಯಲ್ಲಿ ಕಲ್ಲನ್ನು ಇಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಿ.ಪಿ.7 ರಲ್ಲಿ ಕಾಣುವ ಚಿಕ್ಕದಾದ ಕೋಣೆಯು ವಾದಿಯ ಜಾಗಾದ ಗಡಿಯವರೆಗೆ ಕಟ್ಟಿಸಿದ್ದು ಕಾಣುತ್ತದೆ ಎಂದರೆ ಸರಿಯಲ್ಲ.

ನಮ್ಮ ಜಾಗಾದ ಸರ್ವೆಯನ್ನು ನಾವು ಯಾವ ತಾರೀಖದಂದು ಮಾಡಿಸಿದ್ದೇವೆ ಎಂದು ನನಗೆ ಗೊತ್ತಿಲ್ಲ. ಸರ್ವೆಯನ್ನು ಮಾಡುವ ಮೊದಲು ನಮಗೆ ಹಾಗೂ ವಾದಿಯವರಿಗೆ ನೋಟಿಸನ್ನು

**ಮೂ.ದಾ.ನಂ.110/2017**

ಪಿ.ಡಬ್ಲ್ಯು.1

ನೀಡಿರುತ್ತಾರೆ ಎಂದರೆ ಸರಿ. ನಾವು ಎರಡು ಸಲ ಈ ಬಗ್ಗೆ ನೋಟಿಸನ್ನು ಮಾಡಿರುತ್ತೇವೆ ಎಂದರೆ ಸರಿ. ದಿನಾಂಕಃ 18-11-2017 ರಂದು ನಾವು ಸರ್ವೆಗೆ ಸಂಭಂಧಪಟ್ಟಂತೆ ಸರ್ವೇಯರ ನೋಟೀಸ ನೀಡಿರುತ್ತಾರೆ ಎಂದರೆ ಸರಿ. ವಾದಿಯು ಸದ್ರಿ ನೋಟಿಸ ತನಗೆ ಮುಟ್ಟಲಿಲ್ಲ ಎಂದು ದಿಃ 18-11-2017 ರಂದು ಭೂಮಾಪಕರು ಸ್ಥಳಕ್ಕೆ ಬಂದಾಗ ತಕರಾರು ತೆಗೆದಿರುತ್ತಾರೆ ಎಂದರೆ ಸಾಕ್ಷಿಯು ಅವರಿಗೆ ನೋಟಿಸ ತಲುಪಿರುತ್ತದೆ ಎಂದು ಹೇಳುತ್ತಾರೆ. ಸರ್ವೆಯ ದಿನ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ 18-11-2017 ರಂದು ಭೂಮಾಪಕರು ಸ್ಥಳಕ್ಕೆ ಬರುವ ಮೊದಲು ನಾವು ಬೇಲಿಯನ್ನು ಕಡಿದಿರುತ್ತೇವೆ ಎಂದರೆ ಸರಿಯಲ್ಲ. ಎರಡನೇ ವಾದಿಯು ಬೇಲಿ ಕಡಿದ ಬಗ್ಗೆ ನಮ್ಮ ವಿರುದ್ಧ ಪೊಲೀಸ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಸದ್ರಿ ದೂರನ್ನು ನೀಡಿದ ಮೇರೆಗೆ ಪೊಲೀಸರು ನಮಗೆ ಠಾಣೆಗೆ ಕರೆದಿರುತ್ತಾರೆ ಎಂದರೆ ಸರಿ. ನಾವು ಪೊಲೀಸ ಠಾಣೆಗೆ ಹೋದ ಮೇರೆಗೆ ವಾದಿಯವರಿಗೆ ತಂಟೆ ತಕರಾರು ಮಾಡುವುದಿಲ್ಲ ಎಂದು ಮುಚ್ಚಳಿಕೆಯನ್ನು ಬರೆದಿರುತ್ತೇವೆ ಎಂದರೆ ಸರಿಯಲ್ಲ. ನಾವು ಪೊಲೀಸ ಠಾಣೆಯಲ್ಲಿ ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 18-11-2017 ರಂದು ಭೂಮಾಪಕರು ಸರ್ವೆಯನ್ನು ಮಾಡದೇ ವಾಪಸ್ಸ ಹೋಗಿರುತ್ತಾರೆ ಎಂದರೆ ಸರಿಯಲ್ಲ. ದಿಃ 28-11-2017 ರಂದು ಭೂಮಾಪಕರು ಪುನಃ ಜಾಗಕ್ಕೆ ಬಂದು ಆಳತೆ ಮಾಡಿರುತ್ತಾರೆ ಎಂದರೆ ಸರಿ. ಸದ್ರಿ ಭೂಮಾಪಕರು ಯಾರು ಎಂದು ನನಗೆ ಗೊತ್ತಿಲ್ಲ. ಸದ್ರಿ ಭೂಮಾಪಕರ ಪರಿಚಯ ಇರುವುದಿಲ್ಲ. ದಿಃ 28-11-2017 ರಂದು ಭೂಮಾಪಕರು ಸ್ಥಳಕ್ಕೆ ಬಂದು ಆಳತೆ ಮಾಡಿ ನಮಗೆ ಬೇಕಾದ ರೀತಿಯಲ್ಲಿ ನಕ್ಷೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ

**ಮೂ.ದಾ.ನಂ.110/2017**

ಪಿ.ಡಬ್ಲ್ಯು.1

ವಾದಿಯವರು ಸದ್ರಿ ಆಳತೆಯು ಸರಿಯಾಗಲಿಲ್ಲ ಎಂಬ ಬಗ್ಗೆ ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ದಿನದಂದು ಭೂಮಾಪಕರು ಮಾಡಿದ ನಕಾಶೆಯನ್ನು ನಾನು ನೋಡಿರುವುದಿಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ